ಪ್ರಮಾಣ ವಚನ ಭೋದಿಸಿದ ದಿನಾಂಕ ಃ**07.12.2024**

ಮುಂದುವರಿದ ಪಾಟೀ ಸವಾಲುಃ **ಶ್ರೀಯುತ** ಎಸ್ ಏನ್ ಎನ್ ಕೆ **ವಕೀಲರಿಂದಃ 1** ಮತ್ತು **2** ನೇ ಪ್ರತಿವಾದಿಗಳ ಪರಃ

ದಾವೆ ಸಲ್ಲಿಸುವ ಪೂರ್ವದಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದ ಆರ್ ಟಿ ಸಿ ಗಳನ್ನು ತೆಗೆದಿರುತ್ತೇನೆ. ಆರ್ ಟಿ ಸಿ ಗಳನ್ನು ಮತ್ತು ಇತರೆ ದಾಖಲಾತಿಗಳನ್ನು ಅಶೋಕ್ ಐವನ್ ಪಿಂಟೋ ಎನ್ನುವವರು ತೆಗೆದುಕೊಟ್ಟಿದ್ದಾರಾ ಎನ್ನುವ ಪ್ರಶ್ನೆಗೆ ಸಾಕ್ಷಿ ನಾನೇ ತೆಗೆದಿದ್ದೇನೆ ಎಂದು ನುಡಿಯುತ್ತಾರೆ. ನಿಪಿ-5 ರಲ್ಲಿ ನಮೂದಿಸಿರುವ ಉದಯಶಂಕರ ಎಂದರೆ ನನ್ನ ಸಹೋದರ ಹಾಗೂ ಗೀತಾ ಎಂದರೆ ನಾನೇ. ನಿಪಿ-6 ರಲ್ಲಿ ನಮೂದಿಸಿರುವ ಉದಯಶಂಕರ ಮತ್ತು ನಾರಾಯಣ ನಾಯ್ಕ ಎನ್ನುವವರು ನನ್ನ ಸಹೋದರರು ಹಾಗೂ ಗೀತಾ ಎಂದರೆ ನಾನೇ. ನಿಪಿ-10 ಆರ್ ಟಿ ಸಿ ಯಲ್ಲಿ ಅದನ್ನು ತೆಗೆದ ದಿನಾಂಕ 30.12.2010 ಎಂದು ನಮೂದಿದೆ ಎಂದರೆ ಸರಿ. ದಾವೆ ಹಾಕುವ ಕಾಲಕ್ಕೆ ನನ್ನ ಮಕ್ಕಳಿಗೆ ನನಗೆ ಇರುವ ಆಸ್ತಿಯಲ್ಲಿ ಹಕ್ಕು ಇದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಆಸ್ತಿ ಮೊದಲು ನನಗೆ ಬಂದ ನಂತರ ನನ್ನ ಮಕ್ಕಳಿಗೆ ಅದರಲ್ಲಿ ಹಕ್ಕು ಇದೆ ಎಂದು ನುಡಿಯುತ್ತಾರೆ.

ನಿಪಿ-18 ರಂತೆ ನನ್ನ ತಾಯಿಗೆ 30 ಸೆಂಟ್ಸ್ ಸ್ವತ್ತು ನೀಡಲಾಗಿದೆ ಎಂದರೆ ಸಾಕ್ಷಿಯು ನನಗೆ ರಾಜಿಯಾಗಿರುವ ವಿಚಾರವೇ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನನ್ನು ಸೇರಿ ನನ್ನ ಸಹೋದರರು ಬೇರೆ ಬೇರೆ ಮನೆಗಳಲ್ಲಿ ಇರುತ್ತೇವೆ ಎಂದರೆ ಸರಿ. ನನ್ನ ಮತ್ತು ನನ್ನ ಸಹೋದರರ ನಡುವೆ ಈಗ ಕೂಡು ಕುಟುಂಬ ಇಲ್ಲ.

Co-partioner ಎನ್ನುವ ಬಗ್ಗೆ ಗೊತ್ತಿಲ್ಲ. ಆ ಬಗ್ಗೆ ನಾನು ನನ್ನ ವಾದಿಪತ್ರದಲ್ಲಿ ನಮೂದಿಸಲು ಮಾಹಿತಿಯನ್ನು ವಕೀಲರಿಗೆ ಕೊಟ್ಟಿಲ್ಲ. ನನಗೆ ಆ ವಕೀಲರನ್ನು ಭೇಟಿ ಮಾಡುವಂತೆ ಯಾರೂ ತಿಳಿ ಹೇಳಿಲ್ಲ, ನಾನೇ ಸ್ವತಃ ಹೋಗಿ

ಅವರನ್ನು ಭೇಟಿ ಮಾಡಿದ್ದೇನೆ. ಸದರಿ ವಿವೇಕಾನಂದ ವಕೀಲರು ನನ್ನ ಕೆಲವು ಸಹಿಗಳನ್ನು ಖಾಲಿ ಕಾಗದ ಪತ್ರದಲ್ಲಿ ಪಡೆದಿರುತ್ತಾರೆ. ಶ್ರೀ ವಿವೇಕಾನಂದ ಕೆ ಎಸ್ ವಕೀಲರನ್ನು ಈ ದಾವೆಯಲ್ಲಿ ನಾನು ವಿಚಾರಣೆ ಮಾಡುತ್ತೇನೆ. ನಾನು ಶ್ರೀ ವಿವೇಕಾನಂದ ಕೆ ಎಸ್ ವಕೀಲರ ಮೇಲೆ ಪೊಲೀಸ್ ಠಾಣೆಗಾಗಲೀ ಅಥವಾ ಕರ್ನಾಟಕ ವಕೀಲರ ಪರಿಷತ್ತಿಗಾಗಲೀ ದೂರು ನೀಡಿಲ್ಲ. ನನ್ನ ಹತ್ತಿರ ಯಾವ ಇಸವಿಯಲ್ಲಿ ಶ್ರೀ ವಿವೇಕಾನಂದ ಕೆ ಎಸ್ ವಕೀಲರು ಖಾಲಿ ಪತ್ರಗಳಿಗೆ ಸಹಿ ಪಡೆದಿದ್ದಾರೆ ಎಂದು ಹೇಳಲಾಗುವುದಿಲ್ಲ. ನಾನು ನನ್ನ ಸಹೋದರ ಉದಯಶಂಕರ, ಅತ್ತಿಗೆಯ ಜೊತೆ ಶ್ರೀ ವಿವೇಕಾನಂದ ಕೆ ಎಸ್ ವಕೀಲರ ಕಚೇರಿಗೆ ಹೋದಾಗ ಖಾಲಿ ಪತ್ರಗಳಿಗೆ ಸಹಿ ಮಾಡಿದ್ದೇನೆ. ಶ್ರೀ ವಿವೇಕಾನಂದ ಕೆ ಎಸ್ ವಕೀಲರು ನಾನು ಮತ್ತು ನನ್ನ ಸಹೋದರ ಉದಯಶಂಕರರವರು ಅವರ ಕಚೇರಿಗೆ ಹೋದಾಗ ನನ್ನ ಪ್ರಕಾರ ಈಗ ತೋರಿಸುತ್ತಿರುವ ಕರಾರು ಪತ್ರದ ಖಾಲಿ ಪತ್ರಕ್ಕೆ ನನ್ನ ಸಹಿ ಪಡೆದುಕೊಂಡು ನಂತರ ಕರಾರು ಪತ್ರವನ್ನು ನನಗೆ ಮೋಸ ಮಾಡುವ ಉದ್ದೇಶದಿಂದ ನನ್ನ ಸಹೋದರನ ಜೊತೆ ಸೇರಿಕೊಂಡು ಸೃಷ್ಟಿಸಿರುತ್ತಾರಾ ಎಂದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ ಅದನ್ನು ನಿಡಿ-3 ಎಂದು ಮಾನ್ಯ ವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಯಿತು. ಸಾಕ್ಷಿ ಮುಂದುವರಿದು ಶ್ರೀ ವಿವೇಕಾನಂದ ವಕೀಲರಿಗೆ ನಾನು ನನಗೆ ಆಸ್ತಿಗಳಲ್ಲಿ ಸಮನಾದ ಪಾಲು ಬರಬೇಕು ಎಂದು ಕೇಳಿದಾಗ ಅವರು ನಾನು ಕೊಡಿಸುತ್ತೇನೆ, ಖಾಲಿ ಪತ್ರಕ್ಕೆ ಸಹಿ ಮಾಡಿ ಹೋಗಿ ಎಂದು ಹೇಳಿದ ಕಾರಣ ಖಾಲಿ ಪತ್ರಕ್ಕೆ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹೇಳಿದಂತೆ ಶ್ರೀ ವಿವೇಕಾನಂದ ಕೆ ಎಸ್ ವಕೀಲರ ಕಚೇರಿಗೆ ನಾನು, ನನ್ನ ಸಹೋದರ ಉದಯಶಂಕರ ರವರು ಹೋದಾಗ ಶ್ರೀ ವಿವೇಕಾನಂದ ಕೆ ಎಸ್ ವಕೀಲರು ನನ್ನ ಸಹಿಯನ್ನು ಖಾಲಿ ಪತ್ರಕ್ಕೆ ಪಡೆದ ಬಗ್ಗೆ ನನ್ನ ವಾದಪತ್ರದಲ್ಲಿ ತಿಳಿಸಿಲ್ಲ ಎಂದರೆ ಸರಿ. ನಿಡಿ-3 ದಾಖಲೆಯ ಬಗ್ಗೆ ನನಗೆ ಯಾವಾಗ ಗೊತ್ತಾಯಿತು ಎಂದು ಹೇಳಲಾಗುವುದಿಲ್ಲ, ನಿಡಿ-3 ದಾಖಲೆಯ ಬಗ್ಗೆ ಗೊತ್ತಾದ ನಂತರ ಈ ದಾವೆ ಸಲ್ಲಿಸಿದಿರಾ ಎಂದರೆ ಸಾಕ್ಷಿಯು ನೆನಪಿಲ್ಲ ಎಂದು ನುಡಿಯುತ್ತಾರೆ. ನಿಡಿ-3 ದಾಖಲೆಯ ಬಗ್ಗೆ ನನ್ನ ಮುಖ್ಯ ವಿಚಾರಣೆಯಲ್ಲಿ ಏನನ್ನೂ ತಿಳಿಸಿಲ್ಲ. ಶ್ರೀ

ವಿವೇಕಾನಂದ ಕೆ ಎಸ್ ವಕೀಲರ ಕಚೇರಿಯಲ್ಲಿ ನಾನು ಖಾಲಿ ಪತ್ರಕ್ಕೆ ಸಹಿ ಮಾಡಿರುವುದನ್ನು ಬಿಟ್ಟರೆ ಬೇರೆ ಇನ್ಯಾವಾಗಲೂ ನನ್ನ ಸಹೋದರ ಮತ್ತು ನನ್ನ ನಡುವೆ ರಾಜಿ ಮಾತುಕತೆ ನಡೆದಿಲ್ಲ.

ನನಗೆ ಮತ್ತು ಶ್ರೀಧರ ಸಫಲ್ಯರಿಗೆ ವಿವಾಹ ವಿಚ್ಛೇದನ ಆದದ್ದೇ ಇಲ್ಲ ಎಂದರೆ ಸರಿಯಲ್ಲ. ದಿ.22-11-2014 ರಂದು 11 ನೇ ಪ್ರತಿವಾದಿಯ ಜೊತೆ ಈ ದಾವೆಯಲ್ಲಿನ ಕೆಲವು ಸ್ವತ್ತುಗಳ ಸಂಬಂಧ ನಾನು ಕರಾರು ಪತ್ರ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. 1 ಸೆಂಟ್ಸ್‌ಗೆ 1,60,000/- ಹಣ ನಿಗಧಿ ಮಾಡಿ ನಾನು ಕರಾರು ಪತ್ರವನ್ನು 11 ನೇ ಪ್ರತಿವಾದಿಯ ಜೊತೆ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ದಿ.22-11-2014 ರ ಒಂದು ಜೆರಾಕ್ಸ್ ಕರಾರು ಪತ್ರವನ್ನು ತೋರಿಸಲಾಗಿ ಅದನ್ನು ನಾನು 11 ನೇ ಪ್ರತಿವಾದಿಯ ಜೊತೆ ಮಾಡಿಕೊಂಡಿದ್ದೇನೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾನು ಮಾಡಿಕೊಂಡಿಲ್ಲ ಎಂದು ನುಡಿಯುತ್ತಾರೆ. 11 ನೇ ಪ್ರತಿವಾದಿ ನನ್ನ ಹಕ್ಕಿನ ಆಸ್ತಿಯನ್ನು ಖರೀದಿ ಮಾಡಲು ಆಸಕ್ತಿ ಹೊಂದಿದ್ದರು ಎಂದರೆ ಸಾಕ್ಷಿ ಅವರು ಒಂದು ಬಾರಿ ನನ್ನ ಸಹೋದರ ನಾರಾಯಣ ನಾಯ್ಕರವರ ಜೊತೆ ಬಂದು ಖರೀದಿ ಮಾಡುತ್ತೇನೆ ಎಂದು ತಿಳಿಸಿದ್ದರು ಎಂದು ನುಡಿಯುತ್ತಾರೆ.

ದಾವಾ ಸ್ವತ್ತಿನ ಸ್ಥಿರಾಸ್ತಿಯಲ್ಲಿ ಒಂದು ನಾಗನ ಕಟ್ಟೆ ಇದೆ ಎಂದರೆ ಸರಿ.

ಈ ಹಂತದಲ್ಲಿ ಮಾನ್ಯ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.

**(ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ**

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು